ಮುಖ್ಯಮಂತ್ರಿಗಳು ಆಗ ಮಾತು ಕೊಟ್ಟು ಬಂದಿದ್ದೀರಿ, ಯಾವುದೇ ಕಂಡಿಷನ್‌ನಲ್ಲಿಯೂ ಈ ರಸ್ತೆಯನ್ನು ತೆಗೆದುಕೊಳ್ಳುವುದಾಗಿ ಹೇಳಿದ್ದಿರಿ ದಯಮಾಡಿ ಸರ್ಕಾರ ಕೊಟ್ಟಂಥ ಮಾತನ್ನು ಉಳಿಸಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ

ಅಧ್ಯಕ್ಷರು ಲೋಕೋಪಯೋಗಿ ಸಚಿವರು, ಉತ್ತರ ಹೇಳಿ

ಶ್ರೀ ಹೆಚ್ ಡಿ ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ್ ಖರ್ಗೆಯವರು ಹೇಳಿದಂತಹ ರಸ್ತೆಯನ್ನು ತೆಗೆದುಕೊಂಡಿದ್ದೇವೆ ಯಾದಗಿರ್ ಷಹಾಪುರ್ ರಸ್ತೆಯನ್ನು ತೆಗೆದುಕೊಂಡಿದ್ದೇವೆ ಇದನ್ನು ಸ್ವಲ್ಪ ಹಣಕಾಸಿನ ಪರಿಸ್ಥಿತಿ ನೋಡಿ ಸಾಹೇಬರ ಜೊತೆಯಲ್ಲಿ, ಹಣಕಾಸಿನ ಸಚಿವರೊಂದಿಗೆ ಮಾತನಾಡಿ ಪರಿಶೀಲನೆ ಮಾಡುತ್ತೇವೆ

ತಿರುವು ಹಾಗೂ ಸೇತುವೆಯನ್ನು ಅಗಲಗೊಳಿಸುವುದು

163(1259) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ–ಸವಣೂರ ತಾಲ್ಲೂಕುಗಳಲ್ಲಿ ಸನ್ 2004–05, 2005–06, 2006–07ನೇ ಸಾಲಿನಲ್ಲಿ ಯಾವ ಯಾವ ಯೋಜನೆಗಳ ಅಡಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಕಾಮಗಾರಿಗಳು ಈಗ ಯಾವ ಹಂತದಲ್ಲಿದೆ,

ಆ) ಕಾಮಗಾರಿಗಳನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ (ಮಾಹಿತಿ ಒದಗಿಸುವುದು),

ಇ) ಕಾರವಾರ–ಇಳಕಲ್ ರಾಜ್ಯ ಹೆದ್ದಾರಿಯ 90 ತಿರುವಿನಲ್ಲಿರುವುದರಿಂದ ವಾಹನಗಳ ಅಪಘಾತಗಳನ್ನು ತಪ್ಪಿಸಲು ತಿರುವನ್ನು ಸೂಕ್ತವಾಗಿ ಅಗಲೀಕರಣ ಮಾಡಲು ಹಾಗೂ ಹಾಲಿ ಇರುವ ಸೇತುವೆಯನ್ನು ಅಗಲಗೊಳಿಸುವ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆಂದು ಈವರೆಗೂ ಕಾರ್ಯರೂಪಕ್ಕೆ ಬರದೇ ಇರುವುದು ಕಾರಣವೇನು,

ಈ) ಹಾಗಿದ್ದಲ್ಲಿ, ಸರಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ವಿವರಗಳನ್ನು ಅನುಬಂಧದಲ್ಲಿ ಪ್ರತ್ಯೇಕವಾಗಿ ಲಗತ್ತಿಸಲಾಗಿದೆ

ಆ) ವಿವರಗಳನ್ನು ಅನುಬಂಧದಲ್ಲಿ ಪ್ರತ್ಯೇಕವಾಗಿ ಲಗತ್ತಿಸಲಾಗಿದೆ

ಇ) ಮತ್ತು ಈ) ಕಾರವಾರ ಇಳಕಲ್ ರಾಜ್ಯ ಹೆದ್ದಾರಿಯ 90ರ ಕಿಮೀ 180–50ರಲ್ಲಿ 90 ಡಿಗ್ರಿ ತಿರುವಿನಲ್ಲಿ ಒಂದು ಹಳೆಯ ಸೇತುವೆ ಇದ್ದು, ಸೇತುವೆಯ ಅಗಲವು ಕಡಿಮೆ ಇರುವುದರಿಂದ ವಾಹನಗಳ ಅಪಘಾತವಾಗದಂತೆ ಅಗಲವಾದ ಸೇತುವೆಯನ್ನು ನಿರ್ಮಾಣ ಮಾಡಲು ಕೆ ಆರ್ ಡಿ ಸಿ ಎಲ್ ಹಂತ 4ರಲ್ಲಿ 2006–07ನೇ ಸಾಲಿನಲ್ಲಿ ರೂ 150 00 ಲಕ್ಷಗಳಿಗೆ ಕೈಗೊಳ್ಳುವ ಕಾಮಗಾರಿಯು ಸರ್ಕಾರದ ಪರಿಶೀಲನೆಯಲ್ಲಿದೆ

ಅನುಬಂಧ–1

ನಮೂನೆ ಎಲ್ಎಕ್ಯೂ ಸಂಖ್ಯೆ 1259ಕ್ಕೆ ವಿವರ

ಕ್ರ. ಸಂ	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಗುತ್ತಿಗೆದಾರರ ಹೆಸರು	ಕಾಮಗಾರಿ ಹೆಸರು	ಕಾಮಗಾರಿ ಹಂತ
1	2	3	4	5	6
2004–05ನೇ ಸಾಲಿನ ವಿವರ					
1	ಶಿಗ್ಗಾಂವ್	5054 ಸಿಆರ್ಎಫ್	ಶ್ರೀ ಬಿ ಎಸ್ ಮೊಳೆ	ಶಿಗ್ಗಾಂವ್ ಸವಣೂರು ರೈಲ್ವೆ ಸ್ಟೇಷನ್ ರಸ್ತೆ ಕಿ ಮೀ 00 ರಿಂದ 8 00ರ ವರೆಗೆ ರಸ್ತೆ ಅಗಲೀಕರಣ ಗೊಳಿಸುವದು ಮತ್ತು ಸುಧಾರಣೆ	ಕಾಮಗಾರಿ ಮುಗಿದಿದೆ
2	ಶಿಗ್ಗಾಂವ್	5054 ನಬಾರ್ಡ್	ಶ್ರೀ ಮಹಾ ಲಿಂಗಶೆಟ್ಟಿ ಕಂಪನಿ	ಶಿಗ್ಗಾಂವ್ ತಾಲ್ಲೂಕಿನ ಮಂಗಳಿ ಮಂಡಸಿ ರಸ್ತೆ ಕಿಮೀ 0 00	ಕಾಮಗಾರಿ ಮುಗಿದಿದೆ

				ರಿಂದ 14 60ರಲ್ಲಿ ಸುಧಾರಣೆ	
3	ಶಿಗ್ಗಾಂವ್	5054 ನಬಾರ್ಡ್	ಶ್ರೀ ಎಸ್ ಆರ್ ನವಲೆ ಹಿರೇಮರ	ಶಿಗ್ಗಾಂವ್ ತಾಲ್ಲೂಕಿನ ಬಂಕಾಪೂರ–ಮೂಳಬಸರಿಕಟ್ಟೆ ರಸ್ತೆ ಕಿಮೀ 0 00 ರಿಂದ 7 50ರಲ್ಲಿ ಸುಧಾರಣೆ	ಕಾಮಗಾರಿ ಮುಗಿದಿದೆ
2005–06ನೇ ಸಾಲಿನ ವಿವರ					ಕಾಮಗಾರಿ ಮುಗಿದಿದೆ
1	ಸವಣೂರು	5054 ಸಿಆರ್ಎಫ್	ಶ್ರೀ ಎ ವಿ ಪಾಟೀಲ	ಶಿಗ್ಗಾಂವ್ ಸವಣೂರು ರೈಲ್ವೆ ಸ್ಟೇಷನ್ ರಸ್ತೆ ಕಿಮೀ 8 10 ರಿಂದ 13 50ರ ವರೆಗೆ ರಸ್ತೆ ಸುದಾರಣೆ	ಕಾಮಗಾರಿ ಮುಗಿದಿದೆ
2	ಸವಣೂರು	5054 ಸಿಆರ್ಎಫ್	ಶ್ರೀ ಮಹಾ ಲಿಂಗಶೆಟ್ಟಿ ಕಂಪನಿ	ಸವಣೂರು ತಾಲ್ಲೂಕಿನ ಸವಣೂರು ಶೆರೇವಾಡ ರಸ್ತೆ ಕಿಮೀ 0 00 ರಿಂದ 12 00ರ ವರೆಗೆ ಸುಧಾರಣೆ	ಕಾಮಗಾರಿ ಮುಗಿದಿದೆ
3	ಸವಣೂರು	5054 ನಬಾರ್ಡ್	ಶ್ರೀ ಎಸ್ ಆರ್ ಬಳ್ಳಾರಿ	ಸವಣೂರು ತಾಲ್ಲೂಕಿನ ಹರೇಮಗದೂರ ಕ್ರಾಸ್‌ನಿಂದ	ಕಾಮಗಾರಿ ಮುಗಿದಿದೆ

				ಸಂತಿಶಿಗ್ಲಿ ವಾಯಾ ಕೆ ಬಿ ತಿಮ್ಮಾಪೂರ– ಇಡಲಯಲ್ಲಾಪೂರ ರಸ್ತೆ ಕಿಮೀ 0 00 ರಿಂದ 8 00ರ ವರೆಗೆ ಸುಧಾರಣೆ	
4	ಶಿಗ್ಗಾಂವ್	3054 ಯೋಜನೆ	ಶ್ರೀ ಎ ವಿ ಪಾಟೀಲ್	ಶಿಗ್ಗಾಂವ್ ತಾಲ್ಲೂಕಿನ ಬದ್ರಾಪೂರ– ಬೊಮ್ಮನಹಳ್ಳಿ ರಸ್ತೆ ಕಿಮೀ 0 00 ರಿಂದ 9 20ರ ರಸ್ತೆ ಸುಧಾರಣೆ	ಕಾಮಗಾರಿ ಮುಗಿದಿದೆ
5	ಶಿಗ್ಗಾಂವ್	3054 ಯೋಜನೆ	ಶ್ರೀ ಎ ವಿ ಪಾಟೀಲ್	ಶಿಗ್ಗಾಂವ್ ತಾಲ್ಲೂಕಿನ ಶಿಗ್ಗಾಂವ್– ಕೋಣಕಕೇರಿ ರಸ್ತೆ ಕಿಮೀ 0 00 ರಿಂದ 6 00ರ ವರೆಗೆ ರಸ್ತೆ ಸುಧಾರಣೆ	ಕಾಮಗಾರಿ ಮುಗಿದಿದೆ
6	ಸವಣೂರು	3054 ಯೋಜನೆ	ಶ್ರೀ ಎಸ್ ಎಸ್ ನಿಂಗಪ್ಪಗೌಡರ	ಸವಣೂರು ತಾಲ್ಲೂಕಿನ ಶಿಗ್ಗಾಂವ್ ಸವಣೂರು ರೈಲ್ವೆ ಸ್ಟೇಷನ್ ರಸ್ತೆ ಕಿಮೀ 8 10 ರಿಂದ 16 60ರ ವರೆಗೆ	ಕಾಮಗಾರಿ ಮುಗಿದಿದೆ

				ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣೆ	
7	ಸವಣೂರು	3054 ಯೋಜನೆ	ಶ್ರೀ ಎಸ್ ಎಸ್ ನಿಂಗಪ್ಪಗೌಡರ	ಸವಣೂರು ತಾಲ್ಲೂಕಿನ ಶಿಗ್ಗಾಂವ್ ಸವಣೂರು ರೈಲ್ವೆ ಸ್ಟೇಷನ್ ರಸ್ತೆ ಕಿಮೀ 16 60 ರಿಂದ 20 80ರ ವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣೆ	ಕಾಮಗಾರಿ ಮುಗಿದಿದೆ
8	ಸವಣೂರು	3054 ಯೋಜನೆ	ಶ್ರೀ ಆರ್ ಎಸ್ ತಿಮ್ಮಾಪೂರ	ಸವಣೂರು ತಾಲ್ಲೂಕಿನ ಶಿಗ್ಗಾಂವ್ ಸವಣೂರು ರೈಲ್ವೆ ಸ್ಟೇಷನ್ ರಸ್ತೆ ಕಿಮೀ 20 60 ರಿಂದ 22 60ರ ವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣೆ	ಕಾಮಗಾರಿ ಮುಗಿದಿದೆ
9	ಸವಣೂರು	4059 ಯೋಜನೆ	ಶ್ರೀ ಆರ್ ಬೊಳಕಟ್ಟಿ	ಸವಣೂರಿನಲ್ಲಿ ಲೋಕೋಪಯೋಗಿ ಇಲಾಖೆ ಉಪ-ವಿಭಾಗ ಕಛೇರಿ ಕಟ್ಟಡ ನಿರ್ಮಾಣ	ಕಾಮಗಾರಿ ಮುಗಿದಿದೆ

10	ಶಿಗ್ಗಾಂವ್	4059 ಯೋಜನೆ	ಶ್ರೀ ಐ ಎಂ ಮೂಡಲಗಿ	ಶಿಗ್ಗಾಂವದಲ್ಲಿ ಅಗ್ನಿಶಾಮಕ ಠಾಣೆ ನಿರ್ಮಾಣ	ಕಾಮಗಾರಿಯ ಅಡಿಪಾಯದ ಕೆಲಸ ಪ್ರಗತಿಯಲ್ಲಿದೆ
11	ಸವಣೂರು	4202 ಕಾಲೇಜು ಶಿಕ್ಷಕ	ಶ್ರೀ ಆರ್ ಎಸ್ ಸಜ್ಜಶೆಟ್ಟರ	ಸವಣೂರಿನಲ್ಲಿ ಪ್ರಥಮ ದರ್ಜೆ ಮಹಾವಿದ್ಯಾಲಯ ಕಟ್ಟಡ ನಿರ್ಮಾಣ	ಆರ್‌ಸಿಸಿ ಮೇಲ್ಛಾವಣಿ ಕೆಲಸ ಪೂರ್ಣ ಗೊಂಡಿದೆ
12	ಶಿಗ್ಗಾಂವ	ಸಮಾಜ ಕಲ್ಯಾಣ ಇಲಾಖೆ	ಶ್ರೀ ವಿ ವಿ ಅರಾದ್ಯಮಠ	ಶಿಗ್ಗಾಂವ ತಾಲ್ಲೂಕಿನ ಅತ್ತಿಗೇರಿ ಗ್ರಾಮದಲ್ಲಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ	ಆರ್‌ಸಿಸಿ ಮೇಲ್ಛಾವಣಿ ಕೆಲಸ ಪೂರ್ಣ ಗೊಂಡಿದೆ ಬಾಗಿಲು ಕಿಡಕಿಗಳನ್ನು ಕೂಡಿಸಲಾಗಿದೆ ಗಾರೆ ಕೆಲಸ ಪ್ರಗತಿಯಲ್ಲಿದೆ
				2006–07ನೇ ಸಾಲಿನ ವಿವರ	
1	ಶಿಗ್ಗಾಂವ್	5054 ಯೋಜನೆ		ಶಿಗ್ಗಾಂವ್ ತಾಲ್ಲೂಕು ಶಿಗ್ಗಾಂವ್ ಕೋಣನಕೇರಿ ರಸ್ತೆ ಕಿಮೀ 5 00 ರಿಂದ 9 50ರ ವರೆಗೆ ಸುಧಾರಣೆ	ಗುತ್ತಿಗೆ ಪತ್ರ ಮಂಜೂರಾತಿ ಗಾಗಿ ಅಇಂ ಕಛೇರಿಗೆ ಸಲ್ಲಿಸಲಾಗಿದೆ
2	ಶಿಗ್ಗಾಂವ್	5054 ಯೋಜನೆ	ಶ್ರೀ ಎ ವಿ ಪಾಟೀಲ್	ಸವಣೂರು ತಾಲ್ಲೂಕಿನ	ಕಾಮಗಾರಿ ಮುಗಿದಿದೆ

				ಸವಣೂರ ಶೆರೇವಾಡ ರಸ್ತೆ ಕಿಮೀ 12 00 ರಿಂದ 14 00ರ ವರೆಗೆ ರಸ್ತೆ ಸುಧಾರಣೆ	
3	ಸವಣೂರು	5054 ಯೋಜನೆ	ಶ್ರೀ ಎ ವಿ ಪಾಟೀಲ್	ಸವಣೂರು ತಾಲ್ಲೂಕಿನ ಸವಣೂರ ಶೆರೇವಾಡ ರಸ್ತೆ ಕಿಮೀ 0 00 ರಿಂದ 4 00ರ ವರೆಗೆ ರಸ್ತೆ ಸುಧಾರಣೆ	ಕಾಮಗಾರಿ ಮುಗಿದಿದೆ
4	ಶಿಗ್ಗಾಂವ್	5054 ಯೋಜನೆ		ಶಿಗ್ಗಾಂವ್ ಸವಣೂರು ರೈಲ್ವೆ ಸ್ಟೇಷನ್ ರಸ್ತೆ ಕಿಮೀ 5 7 ರಿಂದ 8 10ರ ವರೆಗೆ ರಸ್ತೆ ಸುಧಾರಣೆ	ಗುತ್ತಿಗೆ ಪತ್ರ ಮಂಜೂರಾತಿಗಾಗಿ ಅಇಂ ಕಛೇರಿಗೆ ಸಲ್ಲಿಸಲಾಗಿದೆ
5	ಸವಣೂರು	5054 ಯೋಜನೆ		ಸವಣೂರು ತಾಲ್ಲೂಕಿನ ರೈಲ್ವೆ ಸ್ಟೇಷನ್ ರಸ್ತೆ ಕಿಮೀ 14 40 ರಿಂದ 22 60ರ ವರೆಗೆ ರಸ್ತೆ ಸುಧಾರಣೆ	ಗುತ್ತಿಗೆ ಪತ್ರ ಮಂಜೂರಾತಿಗಾಗಿ ಅಇಂ ಕಛೇರಿಗೆ ಸಲ್ಲಿಸಲಾಗಿದೆ
6	ಸವಣೂರು	5054 ನಬಾರ್ಡ್	ಶ್ರೀ ಎಸ್ ಆರ್ ಬಳ್ಳಾರಿ	ಸವಣೂರು ತಾಲ್ಲೂಕಿನ	ಕಾಮಗಾರಿ ಪ್ರಗತಿಯಲ್ಲಿದೆ

				ಕಡಕೋಳ– ಸಂತಿಶಿಗ್ಲಿ ರಸ್ತೆ ಕಿಮೀ 0 00 ರಿಂದ 6 70ರ ವರೆಗೆ ರಸ್ತೆ ಸುಧಾರಣೆ	
7	ಸವಣೂರು	5054 ನಬಾರ್ಡ	ಶ್ರೀ ಎಸ್ ಆರ್ ಬಳ್ಳಾರಿ	ಸವಣೂರು ತಾಲ್ಲೂಕಿನ ಯಲವಾಗಿ– ಕಾರಡಗಿ ರಸ್ತೆ ಕಿಮೀ 0 00 ರಿಂದ 13 50ರ ವರೆಗೆ ಸುಧಾರಣೆ	ಕಾಮಗಾರಿ ಪ್ರಗತಿಯಲ್ಲಿದೆ
8	ಶಿಗ್ಗಾಂವ್	5054 ನಬಾರ್ಡ್	–	ಸವಣೂರು ತಾಲ್ಲೂಕಿನ ಪಿಬಿ ರಸ್ತೆಯಿಂದ ಕುಮಟಾ ತಡಸ ವಯಾ ಶಾಡಂಬಿ ಕುನ್ನೂರ ಮಮದಾಪೂರ ರಸ್ತೆ ಸುಧಾರಣೆ	ಕರಡು ಗುತ್ತಿಗೆ ಪತ್ರ ಮಂಜೂರಾತಿಗಾಗಿ ವೃತ್ತ ಕಛೇರಿಗೆ ಸಲ್ಲಿಸಲಾಗಿದೆ
9	ಶಿಗ್ಗಾಂವ್	3054 ಯೋಜನೆ	–	ಶಿಗ್ಗಾಂವ್ ತಾಲ್ಲೂಕಿನ ಸವಣೂರು ಶೆರೇವಾಡ ರಸ್ತೆ 15 00 ರಿಂದ 17 00ರಲ್ಲಿ ಅಭಿವದ್ಧಿ ಪಡಿಸುವುದು	ಕರಡು ಗುತ್ತಿಗೆ ಪತ್ರ ಮಂಜೂರಾತಿಗಾಗಿ ವೃತ್ತ ಕಛೇರಿಗೆ ಸಲ್ಲಿಸಲಾಗಿದೆ

10	ಶಿಗ್ಗಾಂವ	3054 ಯೋಜನೆ	–	ಶಿಗ್ಗಾಂವ್ ತಾಲ್ಲೂಕಿನ ಪಿಬಿ ರಸ್ತೆಯಿಂದ ಮಮದಾಪೂರ ರಸ್ತೆ ಕಿಮೀ 0 00 ರಿಂದ 6 00ರ ವರೆಗೆ ಸುಧಾರಣೆ	ಕರಡು ಗುತ್ತಿಗೆ ಪತ್ರ ಮಂಜೂರಾತಿಗಾಗಿ ವೃತ್ತ ಕಛೇರಿಗೆ ಸಲ್ಲಿಸಲಾಗಿದೆ
11	ಶಿಗ್ಗಾಂವ್	3054– 12ನೇ ಹಣಕಾಸು	–	ಶಿಗ್ಗಾಂವ್ ತಾಲ್ಲೂಕಿನ ಮಂಗಳಿ ಮಂಡಸಿ ರಸ್ತೆ ಕಿಮೀ 1 50 ರಿಂದ 7 70ರ ವರೆಗೆ ಸುಧಾರಣೆ	ಕರಡು ಗುತ್ತಿಗೆ ಪತ್ರ ಮಂಜೂರಾತಿಗಾಗಿ ವೃತ್ತ ಕಛೇರಿಗೆ ಸಲ್ಲಿಸಲಾಗಿದೆ
12	ಶಿಗ್ಗಾಂವ್	3054– 12ನೇ ಹಣಕಾಸು	–	ಶಿಗ್ಗಾಂವ್ ತಾಲ್ಲೂಕಿನ ಶಿಗ್ಗಾಂವ್ ಸವಣೂರು ರೈಲ್ವೆ ಸ್ಟೇಷನ್ ರಸ್ತೆ ಕಿಮೀ 5 70 ರಿಂದ 8 10ರ ಸುಧಾರಣೆ	ಕರಡು ಗುತ್ತಿಗೆ ಪತ್ರ ಮಂಜೂರಾತಿಗಾಗಿ ವೃತ್ತ ಕಛೇರಿಗೆ ಸಲ್ಲಿಸಲಾಗಿದೆ
13	ಸವಣೂರು	3054– 12ನೇ ಹಣಕಾಸು	–	ಸವಣೂರು ತಾಲ್ಲೂಕಿನ ಸವಣೂರು– ಶೆರೇವಾಡ ರೈಲ್ವೆ ಸ್ಟೇಷನ್ ರಸ್ತೆ ಕಿಮೀ 4 0 ರಿಂದ 12 00ರ ಆಯ್ದ ಭಾಗಗಳಲ್ಲಿ ಸುಧಾರಣೆ	ಕರಡು ಗುತ್ತಿಗೆ ಪತ್ರ ಮಂಜೂರಾತಿಗಾಗಿ ವೃತ್ತ ಕಛೇರಿಗೆ ಸಲ್ಲಿಸಲಾಗಿದೆ

ಶ್ರೀ ಸಿಂಧೂರ ಜಿ ರಾಜಶೇಖರ್ ಕೆಲವು ಕಾಮಗಾರಿಗಳು ಇನ್ನೂ ಪ್ರಗತಿಪಥದಲ್ಲಿದ್ದರೂ ಸಹ ಕಾಮಗಾರಿ ಮುಗಿದಿದೆಯೆಂದು ಕೊಟ್ಟಿದ್ದಾರೆ ಉದಾಹರಣೆಗೆ ಸವಣೂರಿನ ಪಿ ಡಬ್ಲ್ಯು ಡಿ ಉಪ ವಿಭಾಗದ ಕಚೇರಿ ಕೆಲಸ ಇನ್ನು ನಡೆಯುತ್ತಿದೆ ಅದು ಇನ್ನೂ ಮುಗಿದಿಲ್ಲ, ಅದರೊಂದಿಗೆ ನಾನು ಈ ಸೇತುವೆ ಬಗ್ಗೆ ಕೇಳಿದ್ದೆ ಅದಕ್ಕೆ ಎಷ್ಟು ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ ನೋಡಿ ಅಧ್ಯಕ್ಷರೆ, "ಕಾರವಾರ ಇಳಕಲ್ ರಾಜ್ಯ ಹೆದ್ದಾರಿಯ 90 ರ ಕಿ ಮೀ 180–50 ರಲ್ಲಿ 90 ಡಿಗ್ರಿ ತಿರುವಿನಲ್ಲಿ ಒಂದು ಹಳೆಯ ಸೇತುವೆಯಿದ್ದು ಸೇತುವೆಯ ಅಗಲ ಕಡಿಮೆಯಿರುವುದರಿಂದ ವಾಹನಗಳು ಅಪಘಾತವಾಗದಂತೆ ಅಗಲವಾದ ಸೇತುವೆಯನ್ನು ನಿರ್ಮಾಣ ಮಾಡಲು ಪರಿಶೀಲನೆಯಲ್ಲಿದೆ`` ಈ ಸೇತುವೆ ಕಿರಿದಾಗಿದ್ದು ತಿರುವಿನಲ್ಲಿರುವುದರಿಂದ ಆ ವಾಹನಗಳು ಸೀದಾ ನಮ್ಮ ಮೋತಿ ತಾಲ್ಲೂಕು ಕೆರೆಗೆ ಬೀಳುವ ಸಂಭವ ಬಹಳ ಇವೆ ಸಾಕಷ್ಟು ಅಪಘಾತಗಳು ಆಗಿವೆ, ಅದಕ್ಕೆ ಅದನ್ನು ಪರಿಶೀಲನೆಗಿಂತ ಆ ಕಾರ್ಯವನ್ನು ಮಾಡುವುದು ಬಹಳ ಅವಶ್ಯಕತೆಯಿದೆ ಎಂದು ತಮ್ಮ ಮೂಲಕ ಅವರನ್ನು ಕೇಳಬಯಸುತ್ತೇನೆ

ಶ್ರೀ ಹೆಚ್ ಡಿ ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) ಮಾನ್ಯ ಸದಸ್ಯರು ಕೇಳಿದ್ದಾರೆ ಈ ಸಾರಿ ಅದನ್ನು ಪರಿಶೀಲನೆ ಮಾಡುತ್ತೇವೆ

ಬ್ರಹ್ಮಾವರದಲ್ಲಿನ ಸರ್ಕಾರಿ ಕಾರ್ಖಾನೆಯಿಂದ ರೈತರಿಗೆ ಬಾಕಿ ಇರುವ ಬಗ್ಗೆ

164(405) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ, ಬ್ರಹ್ಮಾವರದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಸ್ಥಳೀಯ ಕಬ್ಬು ಬೆಳೆಗಾರರಿಗೆ ಎಷ್ಟು ಮೊತ್ತ ಪಾವತಿಗೆ ಬಾಕಿ ಇದೆ, ರೈತರಿಗೆ ಹಣ ಪಾವತಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ಬ್ರಹ್ಮಾವರ ಸಹಕಾರ ಸಕ್ಕರೆ ಕಾರ್ಖಾನೆಗೆ ರೈತರು ಕಬ್ಬು ಸರಬರಾಜು ಮಾಡಿದ ಕಬ್ಬಿನ ಬಿಲ್ ಬಾಕಿ ರೂ 312 00 ಲಕ್ಷ ಇರುತ್ತದೆ ಈ ಕಾರ್ಖಾನೆಯನ್ನು ಸರ್ಕಾರದ ಆದೇಶ ಸಂಖ್ಯೆ ಸಇ 103 ಸಸಕಾ 2006, ದಿನಾಂಕ 27–11–2006ರನ್ವಯ ಗುತ್ತಿಗೆ ಆಧಾರದ ಮೇಲೆ ನೀಡಲು ಆದೇಶವಾಗಿರುತ್ತದೆ ಗುತ್ತಿಗೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಗುತ್ತಿಗೆ

P2
10